ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಸಂಪಾದಕ : ಮಂಜು ಬನವಾಸೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No. 1 | Issue : 286 | Pages .02 | Date : 05.10.2025 SUNDAY RNI NO.KARKAN/2024/89601 Kannada Daily
ಸಂಪುಟ : 01 – ಸಂಚಿಕೆ : 286 – ಪುಟಗಳು : 02 05.10.2025 ಭಾನುವಾರ Ph : 8762954248 ದರ : ₹1

# ವೃದ್ಧಾಪ್ಯ ಜೀವನದ ಅವಿಭಾಜ್ಯ ಅಂಗ

## ವಿಶ್ವ ಹಿರಿಯ ನಾಗರಿಕರ ದಿನಾಚರಣೆ | ಜಿಲ್ಲಾಧಿಕಾರಿ ಲತಾಕುಮಾರಿ ಅಭಿಮತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವೃದ್ಧಾಪ್ಯ ಜೀವನದ ಅವಿಭಾಜ್ಯ ಅಂಗವಾಗಿದ್ದು, ಕೊನೆಗಾಲದಲ್ಲಿ ಯಾರಿಗೂ ಭಾರವಾಗದಂತೆ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿ,ಭಾರತೀಯ ಸಂಸ್ಕೃತಿಯಲ್ಲಿ ನಾಗರಿಕರ ಸ್ಥಾನ ಪ್ರಾಧ್ಯಾನತೆ ಪಡೆದಿದೆ. ಅವರು ತಮ ಸಂಪೂರ್ಣ ಜೀವನವನ್ನು ಕುಟುಂಬ, ಸಮಾಜ ಹಾಗು ದೇಶಕ್ಕಾಗಿ ಕಳೆಯುತ್ತಾರೆ. ಅವರು ಆಲದ ಮರದ ಬೇರುಗಳಿದ್ದಂತೆ. ಈ ಬೇರುಗಳಿಲ್ಲದೆ ಕಲ್ಪನೆ ಸಹ ಸಾಧ್ಯವಿಲ್ಲವೆಂದರು.

ಮನುಷ್ಯನ ಕಾಲಘಟ್ಟದಲ್ಲಿ ಬಾಲ್ಯ, ಯೌವ್ವನ, ವೃದ್ಧಾಪ್ಯವೆಂಬ ಮೂರು ಹಂತಗಳಿವೆ. ವೃದ್ಧಾಪ್ಯ ಕಠಿಣವೆಂದು ಭಾವಿಸಬಾರದು. ಜೀವನದ ಒಂದು ಭಾಗ ಅದನ್ನು ತುಂಬಾ ಸಂತೋಷ, ಗೌರವಯುತವಾಗಿ ಘನತೆಯಿಂದ ಸ್ವೀಕರಿಸಿ ಜೀವಿಸುವುದು ಕಲೆಯೆಂದರು.

**ಜೀವಿತಾವಧಿ ಹೆಚ್ಚಳ:**

ಹಿಂದಿನ ದಿನಮಾನಗಳಿಗೆ ಹೋಲಿಸಿದರೆ ಇಂದಿನ ದಿನಗಳಲ್ಲಿ ಮನುಷ್ಯನ ಜೀವಿತಾವಧಿ ಹೆಚ್ಚಾಗಿದೆ. ಅದಕ್ಕೆ ಕಾರಣ ಆರೋಗ್ಯದಲ್ಲಿ ಸುಧಾರಣೆಯಾಗಿರುವುದು, ಆರೋಗ್ಯವೇ ಆಸ್ತಿ, ಹಣಕಾಸಿನ ವಿಚಾರದಲ್ಲಿ ಸ್ವತಂತ್ರವಾಗಿರಬೇಕು. ಯಾರಿಗೂ ಭಾರವಾಗಂತೆ ಕೊನೆಯ ಉಸಿರು ಇರುವವರೆಗೂ ಆರೋಗ್ಯ ಕಾಪಾಡಿಕೊಂಡು ಶಿಸ್ತುಬದ್ಧ ಜೀವನ ನಡೆಸಬೇಕು. ಕಿರಿಯರಿಂದ ನಿರೀಕ್ಷೆ ಕಡಿಮೆ ಮಾಡಬೇಕೆಂದು ತಿಳಿಸಿದರು.

ವಯಸ್ಸುಕೇವಲ ಸಂಖ್ಯೆ, ಮನಸ್ಸಿಗೆ ಜಡ್ಡು ಹಿಡಿಯದಂತೆ ಕ್ರಿಯಾಶೀಲರಾಗಿ ಯಾರ ಮೇಲೂ ಅವಲಂಬಿತರಾಗದೆ ಆತ್ಮವಿಶ್ವಾಸದಿಂದ ಜೀವನ ನಡೆಸಬೇಕು. ಹಿರಿಯರು ಅನಿವಾರ್ಯ ಸಂದರ್ಭಗಳಲ್ಲಿ ವೃದ್ಧಾಶ್ರಮಗಳಲ್ಲಿ ಜೀವನ ನಡೆಸಲು ಸರ್ಕಾರ ಅವಕಾಶ ಕಲ್ಪಿಸಿದೆ ಎಂದರು.

ಹಿರಿಯರು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂದರಲ್ಲದೆ, ಹಿರಿಯರಿಗೆ ಯಾವುದೇ ತೊಂದರೆಯಾದಲ್ಲಿ ಸಹಾಯವಾಣಿ ಸಂಖ್ಯೆ 14567 ಕರೆ ಮಾಡಬೇಕು. ಮನೆಯಲ್ಲಿ ಮಕ್ಕಳು ಪ್ರತಿನಿತ್ಯ ತಂದೆ–ತಾಯಿ ನಡವಳಿಕೆ ನೋಡುತ್ತಾ ಬೆಳೆಯುತ್ತಾರೆ. ಈ ನಿಟ್ಟಿನಲ್ಲಿ ಮನೆಗಳಲ್ಲಿ ಹಿರಿಯರನ್ನು ಪ್ರೀತಿಯಿಂದ ನೋಡಿಕೊಂಡಲ್ಲಿ ತಮ ಮಕ್ಕಳು ಮುಂದೆ ಅದನ್ನೇ ಅನುಸರಿಸುತ್ತಾರೆ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಮಾತನಾಡಿ, ಹಿರಿಯರಿಲ್ಲದ ಮನೆ ಕಳಸವಿಲ್ಲದ ಮಂದಿರವಿದ್ದಂತೆ.

ಹಳೆಯ ಬೇರಿನೊಂದಿಗೆ ಹೊಸ ಚಿಗುರು ಎಂಬ ಮಾತಿನಂತೆ ಹಿರಿಯರೊಟ್ಟಿಗೆ ಬದುಕಬೇಕು. ಪರಸ್ಪರ ಸಂಬಂಧ ಪ್ರೀತಿಯಿಂದ ಅರ್ಥ ಮಾಡಿಕೊಂಡಾಗ ಸಾರ್ಥಕ ಜೀವನ ನಡೆಸಲು ಸಾಧ್ಯವಾಗುತ್ತದೆ. ಮಾನಸಿಕವಾಗಿ ಬದಲಾವಣೆ ಮಾಡಿಕೊಂಡು ಹೊಂದಾಣಿಕೆಯಿಂದ ಇದ್ದರೆ ಲವಲವಿಕೆಯಿಂದ ಸಂಧ್ಯಾ ಕಾಲದ ಜೀವನ ನಡೆಸಲು ಸಾಧ್ಯವಾಗುತ್ತದೆಂದು ತಿಳಿಸಿದರು.

ಹಿರಿಯರು ನಿರೀಕ್ಷೆಗಳನ್ನು ಕಡಿಮೆ ಮಾಡಿಕೊಂಡಾಗ ಉತ್ತಮ ಜೀವನ ನಡೆಸಲು ಅನುಕೂಲವಾಗುತ್ತದೆ. ಮನುಷ್ಯ ಸಂಘ ಜೀವಿ. ಒಂಟಿತನ ಅವರಿಗೆ ದೊಡ್ಡ ಶತ್ರು. ಇಳಿವಯಸ್ಸಿನಲ್ಲಿ ಪತಿ–ಪತ್ನಿ ಇಬ್ಬರಲ್ಲಿ ವಯೋಸಹಜವಾಗಿ ಒಬ್ಬರು ಮೃತಪಟ್ಟ ಸಂದರ್ಭದಲ್ಲಿ ಒಂಟಿತನ ಕಾಡುವುದು ಸಹಜ. ನೋವು ಕಷ್ಟ ಎಲ್ಲರಿಗೂ ಇರುತ್ತದೆ. ಅದನ್ನು ನಗು ನಗುತ್ತಾ ಸ್ವೀಕರಿಸಿ ಜೀವನೋತ್ಸಾಹ ಬೆಳೆಸಿಕೊಳ್ಳಬೇಕೆಂದರು.

ಸರ್ಕಾರ ಹಿರಿಯ ನಾಗರಿಕರ ಪಾಲನೆ ಪೋಷಣೆ ಹಾಗೂ ಸಂರಕ್ಷಣೆಗಾಗಿ ಜಾರಿಗೆ ತಂದಿರುವ ಕಾಯ್ದೆ ಬಗ್ಗೆ ವಿವರಿಸಿ ಯಾವ ತೊಂದರೆಗೆ ಸಿಲುಕಿದಾಗ ಕಾನೂನಾತಕವಾಗಿ ಉಚಿತ ಸೇವೆಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನೀಡಲಾಗುವುದು. ಯಾವ ಹಿಂಜರಿಕೆ ಮಾಡದೆ ಅದರ ಸದುಪಯೋಗ ಪಡೆದುಕೊಳ್ಳಿರಿ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು ಮಾತನಾಡಿ, ಹಿರಿಯರು ಛಲ, ಸಹನೆ, ಅಭಿಮಾನ, ಸತ್ಯ ನಿಷ್ಠೆಯಿಂದ ಇರುತ್ತಾರೆ.

ಅವರ ಸ್ವಾತಂತ್ರ್ಯವನ್ನು ಮಕ್ಕಳು ಕಿತ್ತುಕೊಳ್ಳದೆ ಪ್ರೀತಿಯಿಂದ ನೋಡಿಕೊಳ್ಳಬೇಕು. ಮನೆಯಲ್ಲಿಯೇ ಕೂಡಿ ಹಾಕದೆ ಹೊರಗೆ ಓಡಾಡಿಕೊಂಡು ಕೊನೆಯ ದಿನಗಳನ್ನು ಸಂತೋಷವಾಗಿ ಕಳೆಯಲು ಅವಕಾಶ ಕಲ್ಪಿಸಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಧರಣಿಕುಮಾರ್, ಹಿರಿಯ ನಾಗರಿಕರ ಮತ್ತು ವಿಕಲಚೇತನರ ಇಲಾಖೆ ಅಧಿಕಾರಿ ಕೆ.ಆರ್. ಅನುಪಮ ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ನಾಗರಿಕರಾದ ಅನಂತರಾಮು ಮತ್ತು ರಂಗಯ್ಯ ಅವರನ್ನು ಸನ್ಮಾನಿಸಲಾಯಿತು. ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಆರೋಗ್ಯ ತಪಾಸಣಾ ಶಿಬಿರ

# ಆಲೂರು ತಾಲ್ಲೂಕಿನ ರಸ್ತೆ ಕಾಮಗಾರಿಗೆ ಭೂಮಿಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಪಡಿಸುವುದರಿಂದ ಹಳ್ಳಿಗಳು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರದ ಅನುದಾನಕ್ಕೆ ಅನುಗುಣವಾಗಿ ಪ್ರತಿ ಗ್ರಾಮದಲ್ಲಿಯೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಆದ್ಯತೆ ನೀಡಲಾಗುತ್ತಿದೆ. ಹಂತ ಹಂತವಾಗಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಗ್ರಾಮೀಣ ರಸ್ತೆ ಅಭಿವೃದ್ಧಿ, ಕುಡಿಯುವ ನೀರು, ಶೌಚಾಲಯ, ಶಾಲಾ, ಅಂಗನವಾಡಿ ಕೋಣೆಗಳು ಹೀಗೆ ಕ್ಷೇತ್ರದ ಕೆಲಸಗಳಿಗೆ ಆದ್ಯತೆ ನೀಡಲಾಗಿದೆ. ಕಾರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಣಿಪುರ ಜಂಕ್ಷನ್ ಬಳಿ ಮಣಿಪುರ ಮತ್ತು ಪುರಭೈರವನಹಳ್ಳಿಗೆ ಸಂಪರ್ಕಿಸುವ ರಸ್ತೆ, ಭರತೂರು, ಬಾಳಿಗನಹಳ್ಳಿ, ಕುಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಳುಗರವಳ್ಳಿ, ಕಟ್ಟಾಯ ಹೋಬಳಿ ಕಾರ್ಲೆ ಪಂಚಾಯಿತಿ ವ್ಯಾಪ್ತಿಯ ದೇವಿಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗಲಿರುವ ಬ್ರಹಲಿಂಗೇಶ್ವರ ದೇವಾಲಯಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳು ನಿಗದಿತ ಸಮಯದಲ್ಲಿ ಮುಗಿಯಬೇಕು. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕೆಂದು ಗುತ್ತಿಗೆದಾರರು ಹಾಗೂ ಎಂಜಿನಿಯರ್‌ಗಳಿಗೆ ಸೂಚಿಸಿದರು.

ವಿವಿಧ ಇಲಾಖೆ ಅಭಿಯಂತರರು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತಿತರರಿದ್ದರು.

# ಸಕಲೇಶಪುರದಲ್ಲಿ ಮರಭೂಮಿ ಬೆಕ್ಕು ರಕ್ಷಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಬೀದಿ ನಾಯಿಗಳ ದಾಳಿಯಿಂದ ತೊಂದರೆಗೆ ಸಿಲುಕಿದ್ದ ಮರಭೂಮಿಯ ಪುಟ್ಟ ಸಿಂಹ ಎಂದೇ ಕರೆಯಲ್ಪಡುವ ಮರಭೂಮಿ ಬೆಕ್ಕನ್ನು ಸ್ಥಳೀಯರು ರಕ್ಷಿಸಿ ಮಾನವೀಯತೆ ಮೆರೆದಿದ್ದಾರೆ.

ಪಶ್ಚಿಮ ಘಟ್ಟದಲ್ಲಿ ವಾಸಿಸುವ ಬೆಕ್ಕು ಆಹಾರ ಅರಸಿ ಪಟ್ಟಣ ಸಮೀಪ ಬಂದಿತ್ತು. ಅದನ್ನು ಕಂಡ 20ಕ್ಕೂ ಹೆಚ್ಚು ಬೀದಿ ನಾಯಿಗಳು ಅಟ್ಟಾಡಿಸಿದವು. ನಾಯಿಗಳಿಗೆ ಪ್ರತಿರೋಧ ಒಡ್ಡುತ್ತಲೇ ನಿಂತ ಬೆಕ್ಕು ನಿತ್ರಾಣಗೊಂಡು ಅಸಹಾಯಕ ಸ್ಥಿತಿಗೆ ತಲುಪಿತು. ನಾಯಿಗಳ ಚೀರಾಟ ಗಮನಿಸಿದ ಪಟ್ಟಣದ ಸಲೀಂ ಹಾಗೂ ಕೇಶವ ಎಂಬುವವರು ಹತ್ತಿರ ಹೋದಾಗ ಅಪರೂಪದ ಜಾತಿಯ ಬೆಕ್ಕು ಇರುವುದನ್ನು ಕಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಅಧಿಕಾರಿ ಅರ್ಜುನ್ ಹಾಗೂ ಸಿಬ್ಬಂದಿ ಬೆಕ್ಕನ್ನು ಪಡೆದು ನಂತರ ಮಾರನಹಳ್ಳಿ ರಕ್ಷಿತಾರಣ್ಯ ಪ್ರದೇಶಕ್ಕೆ ಬಿಟ್ಟರು.40 ರಿಂದ 50 ಸೆಂ.ಮೀ. ಉದ್ದದ ಬೆಕ್ಕು ಬೂದು ಬಣ್ಣವನ್ನೊಳಗೊಂಡಿದೆ. ಕಿವಿಗಳು ವಿಶಾಲವಾಗಿದ್ದು ಚುರುಕಾಗಿ ಓಡಾಡುತ್ತದೆ. ಕಾಲುಗಳ ಕೆಳಭಾಗದಲ್ಲಿ ರೋಮ ಇರುತ್ತದೆ. ಬಿಸಿ ಮರಳಿನ ಮೇಲೆ ನಡೆಯುವಾಗ ಪಾದಗಳಿಗೆ ಬಿಸಿ ತಾಗದಂತೆ ರಕ್ಷಣೆ ಮಾಡಿಕೊಳ್ಳುತ್ತದೆ. ಮರಭೂಮಿಯಲ್ಲಿ ಕಾಣಸಿಗುವ ಬೆಕ್ಕು ಪಶ್ಚಿಮಘಟ್ಟದಲ್ಲೂ ಇರುವುದು ವಿಶೇಷವಾಗಿದೆ. ಮಾನವನ ಹಸ್ತಕ್ಷೇಪ ಹಾಗೂ ವಾಸಸ್ಥಾನ ನಾಶದಿಂದ ಜೀವ ಸಂಕುಲ ಅಪಾಯ ಸ್ಥಿತಿ ಎದುರಿಸುತ್ತಿದೆ.

# ಬರಹಗಾರರ ಸಂಘದ ಜಿಲ್ಲಾ ಗೌರವಾಧ್ಯಕ್ಷ ರಾಗಿ ವೆಂಕಟೇಶ್



ಹಾಸನ: ರಾಜ್ಯ ಬರಹಗಾರರ ಸಂಘದ ಜಿಲ್ಲಾ ಗೌರವಾಧ್ಯಕ್ಷ ರಾಗಿ ಪತ್ರಕರ್ತ ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಹೂವಿನ ಹಡಗಲಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ರಾಜ್ಯ ಬರಹಗಾರರ ಸಂಘ ಈಗಾಗಲೇ ರಾಜ್ಯಾದ್ಯಂತ ಹಲವು ಕಾರ್ಯಕ್ರಮಗಳನ್ನು ಹಮಿಕೊಂಡಿದೆ. ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕು ಘಟಕಗಳನ್ನು ಹೊಂದಿದೆ. ಸಂಘದ ಜಿಲ್ಲಾಧ್ಯಕ್ಷ ಸುಂದರೇಶ್ ಉಡುವಾರೆ ಹಾಗೂ ಪದಾಧಿಕಾರಿಗಳು ವೆಂಕಟೇಶ್ ಅವರಿಗೆ ಅಭಿನಂದಿಸಿದ್ದಾರೆ. ಬರಹಗಾರರ ಸಂಘದ ರಾಜ್ಯಾಧ್ಯಕ್ಷ ಮಧುನಾಯ್ಕ ಲಂಬಾಣಿ ನೇಮಕ ಮಾಡಿ ಆದೇಶಿಸಿದ್ದಾರೆ.

# ಪ್ರತ್ಯೇಕ ಅಪಘಾತ: ಇಬ್ಬರು ಸಾವು

ಹಾಸನ: ಬೈಕ್ ಡಿಕ್ಕಿಯಾಗಿ ಮತ್ತೊಂದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕು ಕೇರಳಾಪುರ–ಸಾಲಿಗ್ರಾಮ ರಸ್ತೆಯ ಜಪ್ಪದ ಕಟ್ಟೆ ಸೇತುವೆ ಸಮೀಪ ನಡೆದಿದೆ. ಮೈಸೂರು ಜಿಲ್ಲೆ ಕುಲುಮೆ ಹೊಸೂರು ಗ್ರಾಮದ ಶರತ್‌ಕುಮಾರ್ (21) ಮೃತ ಯುವಕ. ಕಾರ್ಯನಿಮಿತ್ತ ಕೇರಳಾಪುರಕ್ಕೆ ತೆರಳಿದ್ದ ಯುವಕ ವಾಪಾಸ್ ಬರುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿ ವಾಹನ ಸಮೇತ ಕೆಳಗೆ ಬಿದ್ದಿದ್ದಾನೆ. ತಲೆ ಹಾಗೂ ಎದೆಗೆ ಬಲವಾದ ಪೆಟ್ಟು ಬಿದ್ದ ಹಿನ್ನೆಲೆ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ಗೊರೂರು–ಕಾರ್ಲೆ ರಸ್ತೆಯ ಸತ್ತಿಗರಹಳ್ಳಿ ಸಮೀಪ ನಡೆದಿದೆ.

ಅರಕಲಗೂಡು ತಾಲ್ಲೂಕು ಗೊರವನಹಳ್ಳಿ ಗ್ರಾಮದ ಕೇಶವಯ್ಯ ಮೃತರು. ಸಹೋದರಿ ಗಂಗಮ ಅವರನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೊಳೆನರಸೀಪುರದಿಂದ ಊರಿಗೆ ವಾಪಾಸ್ಸಾಗುತ್ತಿದ್ದಾಗ ಎದುರುಗಡೆಯಿಂದ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಇಬ್ಬರನ್ನು ಹಿಮ್ಸ್‌ಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಕೇಶವಯ್ಯ ಮೃತಪಟ್ಟಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪಗೆ ಅದ್ದೂರಿ ಸ್ವಾಗತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಹಾಸನ ನಗರಾಭಿವೃದ್ಧಿ ಪ್ರಾಧಿಕಾರ (ಹುಡಾ) ಅಧ್ಯಕ್ಷ ಪಟೇಲ್ ಶಿವಪ್ಪ ಅವರಿಗೆ ನಗರದಲ್ಲಿ ಶನಿವಾರ ಅದ್ದೂರಿ ಸ್ವಾಗತ ಕೋರಲಾಯಿತು.



ಮೊದಲಿಗೆ ನಗರದ ಅಂಬೇಡ್ಕರ್ ವೃತ್ತದಲ್ಲಿರುವ ಸಂವಿಧಾನ ಶಿಲ್ಪಿಯ ಪ್ರತಿಮೆಗೆ ಮಾಲಾರ್ಪಾಣೆ ಮಾಡಿದ ಶಿವಪ್ಪ ಅವರು, ನಂತರ ಪ್ರಸನ್ನ ಗಣಪತಿ ಆಸ್ಥಾನ ಮಂಟಪಕ್ಕೆ ತೆರಳಿ, ವಿಘ್ನ ನಿವಾರಕನಿಗೆ ಪೂಜೆ ಸಲ್ಲಿಸಿದರು.

ನಂತರ ಪ್ರವಾಸಿ ಮಂದಿರಕ್ಕೆ ತೆರಳಿ ಅಲ್ಲಿ ತಮಗಾಗಿ ಕಾಯುತ್ತಿದ್ದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ನಾನಾ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸೇರಿದಂತೆ ಎಲ್ಲರಿಂದಲೂ ಅಭಿನಂದನೆ ಸ್ವೀಕರಿಸಿ ಸಂತಸ ಹಂಚಿಕೊಂಡರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ ಪಟೇಲ್ ಶಿವಪ್ಪ ಅವರು, ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ, ಜಿಪಂ ಸದಸ್ಯನಾಗಿ, ಕೆಪಿಸಿಸಿ ಕಾರ್ಯದರ್ಶಿಯಾಗಿ ಪಕ್ಷ ನೀಡಿದ ಹಲವು ಜವಾಬ್ದಾರಿಗಳನ್ನು ನಿಭಾಯಿಸಿದ್ದ ನನಗೆ ಸ್ಥಳೀಯ ಶಾಸಕ ಕೆ.ಎಂ.ಶಿವಲಿಂಗೇಗೌಡ ಸೇರಿದಂತೆ, ಗಂಡಸಿ ಹಾಗೂ ಅರಸೀಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪಕ್ಷದ ಹಿರಿಯರು, ನನ್ನನ್ನು ಹುಡಾ ಅಧ್ಯಕ್ಷ ಸ್ಥಾನಕ್ಕೆ ಶಿಫಾರಸು ಮಾಡಿದ್ದರು. ಎಲ್ಲರ ಆಶಯದಂತೆ ಸಿಎಂ ಸಿದ್ದರಾಮಯ್ಯ ಅವರು, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನನ್ನನ್ನು ಹುಡಾ ಅಧ್ಯಕ್ಷ ನನ್ನಾಗಿ ಮಾಡಿ, ನನ್ನ ಸೇವೆ ಗುರುತಿಸಿರುವುದಕ್ಕೆ ಎಲ್ಲರಿಗೂ ಆಭಾರಿ ಎಂದು ಮನದಾಳದ ಮಾತು ಹಂಚಿಕೊಂಡರು.

ಹುಡಾ ಅಧ್ಯಕ್ಷ ಸ್ಥಾನ ಸಾಮಾನ್ಯ ಹುದ್ದೆಯಲ್ಲ. ಅದರದೇ ಆದ ಗಂಭೀರತೆ ಇದೆ. ಪಕ್ಷ ಹಾಗೂ ಮುಖಂಡರು ಸೇರಿದಂತೆ, ಅರಸೀಕೆರೆ ತಾಲ್ಲೂಕಿನ ಜನತೆಗೆ ಮುಜುಗರ ಆಗದ ರೀತಿ ಕೆಲಸ ಮಾಡುವೆ ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಮುಖಂಡ ಜಿ.ಬಿ.ಶಶಿಧರ್ ಮಾತನಾಡಿ, ಶಿವಪ್ಪ ಅವರ ಪಕ್ಷ ನಿಷ್ಠೆಗೆ ಹಾಗೂ ಅವರಲ್ಲಿರುವ ಸಾಮಾಜಿಕ ಕಳಕಳಿಯನ್ನು ಪಕ್ಷ ಗುರುತಿಸಿ ಇಂದು ಜವಾಬ್ದಾರಿ ಸ್ಥಾನ ನೀಡಿದೆ. ಇದು ಪಕ್ಷದ ಯುವ ಕಾರ್ಯಕರ್ತರಿಗೆ ಸ್ಫೂರ್ತಿಯಾಗಿದೆ. ಸೂಕ್ತ ಸಂದರ್ಭದಲ್ಲಿ ಪಕ್ಷ ಪ್ರತಿಯೊಬ್ಬರಿಗೂ ಸೂಕ್ತ ಸ್ಥಾನಮಾನ ನೀಡಲಿದೆ ಎಂಬುದಕ್ಕೆ ಶಿವಪ್ಪ ಅವರೇ ಸಾಕ್ಷಿ ಎಂದರು.

ನಗರಸಭೆ ಅಧ್ಯಕ್ಷ ಎಂ.ಸಮೀವುಲ್ಲಾ ಮಾತನಾಡಿ, ಪಟೇಲ್ ಶಿವಪ್ಪ ಅವರು ಹುಡಾ ಅಧ್ಯಕ್ಷ ರಾಗಿರುವುದು ಸಂತಸದ ವಿಷಯ. ಜಿಲ್ಲೆಯ ಅಭಿವೃದ್ಧಿಗೆ ಇವರಿಂದ ಕೊಡುಗೆ ದೊರೆಯಲಿದೆ ಎಂಬ ವಿಶ್ವಾಸ ನಮೆಲ್ಲರಿಗೂ ಇದೆ ಎಂದರು.

ಉಪಾಧ್ಯಕ್ಷ ಮನೋಹರ್ ಮೇಸ್ತ್ರಿ, ನಗರಸಭೆ ಸದಸ್ಯ ವೆಂಕಟಮುನಿ ಸೇರಿದಂತೆ ಕೈ ಮುಖಂಡರಾದ ಗೌಸ್‌ಖಾನ್, ಉಮಾಶಂಕರ್, ಸುಬ್ರಹ್ಮಣ್ಯ, ಬಾಬು, ಯೂನಸ್ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಸಿಖಂದರ್, ತಾಪಂ ಮಾಜಿ ಅಧ್ಯಕ್ಷರಾದ ಈಶ್ವರಪ್ಪ, ಹನುಮೇಗೌಡ, ಮುಖಂಡ ಮೋಹನ್ ನಾಯ್ಕ ಇದ್ದರು.

# ದುಶ್ಚಟ ಮುಕ್ತ ಸಮಾಜ ಗಾಂಧೀಜಿ ಕನಸು: ತಹಶೀಲ್ದಾರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮಹಾತ ಗಾಂಧೀಜಿಯ ಕನಸು ದುಶ್ಚಟಮುಕ್ತ ಸಮಾಜ ನಿರ್ಮಾಣ ಸಂಕಲ್ಪವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾಡುತ್ತಿದ್ದಾರೆ ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ. ಸಿ. ಟ್ರಸ್ಟ್ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಸಹಯೋಗದಲ್ಲಿ ಏರ್ಪಡಿಸಿದ್ದ ಗಾಂಧಿ ಜಯಂತಿ ಉದ್ಘಾಟಿಸಿ ಮಾತನಾಡಿ, ಮನುಷ್ಯ ದುಶ್ಚಟಗಳಿಂದ ದೂರ ಉಳಿದರೆ ಸುಖ ಸಂಸಾರದೊಂದಿಗೆ ಶಾಂತಿಯಿಂದ ಬದುಕಬಹುದು ಎಂದರು.

ಸಾಹಿತಿ ಎಂ.ಜಿ. ಪರಮೇಶ್ ಮಡಬಲು ಮಾತನಾಡಿ, ಸಮಾಜದಲ್ಲಿ ಮದ್ಯಪಾನ ಮಾಡುವವರ ಕುಟುಂಬಗಳ ಪರಿಸ್ಥಿತಿಯನ್ನರಿತ ದರ್ಮಸ್ಥಳ ಧರ್ಮಾಧಿಕಾರಿಗಳು, ಮದ್ಯಪಾನ ಮಾಡುವವರ ಅಭ್ಯಾಸ ಬಿಡಿಸಲು ಕಾರ್ಯಕ್ರಮ ರೂಪಿಸಿ ನವಜೀವನ ರೂಪಿಸಲು ಶ್ರಮಿಸುತ್ತಿದ್ದಾರೆ. ಅಲ್ಲದೆ ಅನೇಕ ಸಮಾಜಮುಖಿ ಕೆಲಸ ಮಾಡುತ್ತಿರುವುದರಿಂದ ಬಹುತೇಕ ಮದ್ಯಮ ವರ್ಗದ ಕುಟುಂಬಗಳಲ್ಲಿ ಶಾಂತಿ ನೆಲೆಸಿದೆ ಎಂದರು.



ಜನಜಾಗೃತಿ ವೇದಿಕೆಯಿಂದ ಮುಖ್ಯಮಂತ್ರಿಗೆ ತಹಶೀಲ್ದಾರ್ ಮೂಲಕ ಹಕ್ಕೊತ್ತಾಯ ಮಂಡನೆಯನ್ನು ಪ್ರಾದೇಶಿಕ ವ್ಯಾಪ್ತಿಯ ಯೋಜನಾಧಿಕಾರಿ ಮುಕೇಶ್ ಒಪ್ಪಿಸಿದರು. ಕಾರ್ಯಕ್ರಮದಲ್ಲಿ ಸಿದ್ದೇಶ್‌ಕುಮಾರ್, ಬಿ. ರೇಣುಕ ಪ್ರಸಾದ್, ಎಎಸ್‌ಐ ದೇವರಾಜ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಮಲ್ಲಿಕಾರ್ಜುನ್, ಹೆಚ್.ಬಿ. ಧರ್ಮರಾಜ್, ಎಂ. ಬಾಲಕೃಷ್ಣ, ಮೋಹನ್, ರಾಜಶೇಖರ್, ಕೆ. ರತ್ನಾಕರ ಕೊಠಾರಿ, ಯಶೋಧ, ನಾಗರಾಜ್ ಉಪಸ್ಥಿತರಿದ್ದರು.

# ಮೀಸಲು ಅರಣ್ಯ ಸಮಸ್ಯೆ ಬಗೆಹರಿಸಿ: ಬಿ. ಶಿವರಾಂ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಣ್ಯ ಇಲಾಖೆಯ ಮೀಸಲು ಅರಣ್ಯ ಹೆಸರಿನಡಿ ನಡೆಯುತ್ತಿರುವ ಅನ್ಯಾಯದಿಂದ ಜಿಲ್ಲೆಯ 50 ಸಾವಿರ ಕುಟುಂಬಗಳು ತೊಂದರೆಗೆ ಸಿಲುಕಿದ್ದು ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಮಾಜಿ ಸಚಿವ ಬಿ.ಶಿವರಾಂ ಆಗ್ರಹಿಸಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ಬೇಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲೇ ಸುಮಾರು 20 ಸಾವಿರಕ್ಕೂ ಹೆಚ್ಚು ಕುಟುಂಬಗಳು ಮೀಸಲು ಅರಣ್ಯ ಹೆಸರಿನಲ್ಲಿ ತೊಂದರೆ ಅನುಭವಿಸುತ್ತಿವೆ. ಅರಣ್ಯ ಇಲಾಖೆ ಅಧಿಕಾರಿಗಳು ರೈತರ ಜೀವನಾಧಾರವಾಗಿರುವ ಜಮೀನನ್ನು ತಮದೆಂದು ಘೋಷಿಸಿ ರಾತ್ರಿ ವೇಳೆ



ಜೆಸಿಬಿ ಮೂಲಕ ಕಂದಕ ಅಗೆದು ಗಿಡ ನೆಡುವ ಕಾರ್ಯ ನಡೆಸುತ್ತಿದ್ದಾರೆ. ಇದನ್ನು ಪ್ರಶ್ನಿಸಿದ ರೈತರ ವಿರುದ್ಧವೇ ಪ್ರಕರಣ ದಾಖಲಿಸಲಾಗುತ್ತಿದೆ. ಅರಣ್ಯ ಇಲಾಖೆ ಚಿರತೆಯಂತೆ ರೈತರ ಮೇಲೆ ಎರಗುತ್ತಿದೆ ಎಂದು ಆರೋಪಿಸಿದರು.

ಬೇಲೂರು ತಾಲ್ಲೂಕಿನ ಅಡವಿ ಬಂಟೇನಹಳ್ಳಿ ಹಾಗೂ ಶಿವಪುರ ಕಾವಲ್ ವ್ಯಾಪ್ತಿಯಲ್ಲಿ ಸಮಸ್ಯೆ ತೀವ್ರವಾಗಿದ್ದು, ರೈತರು ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರ ಜಾಣ ಮೌನ ವಹಿಸಿರುವುದು ವಿಷಾದನೀಯ. ಕೆಡಿಪಿ ಸಭೆಗಳಲ್ಲಿ ಜನಪ್ರತಿನಿಧಿಗಳು ಈಗ ಮಾತ್ರ ಮಾತಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ರೈತರ ಭೂಮಿ ಉಳಿಸಿಕೊಳ್ಳುವ ಕಾರ್ಯ ಆಗಲೇಬೇಕು ಎಂದು ಆಗ್ರಹಿಸಿದರು.

ನೂರಾರು ವರ್ಷಗಳಿಂದ ಅಲ್ಲಿ ನೂರಾರು ಕುಟುಂಬ ವಾಸ ಇವೆ. ಈ ಹಿಂದೆ ಕಡ್ಡಾಯ ಇಲಾಖೆಯಿಂದ ಎಲ್ಲಾ ದಾಖಲಾತಿ ಕೂಡ ನೀಡಿದ್ದು, ಇದಕ್ಕೆ ಅರಣ್ಯ ಇಲಾಖೆ ಕೂಡ ಸಮ್ಮತಿ ಸೂಚಿಸಿದೆ.

ಆದರೆ ಈಗ ಆ ಜನರನ್ನ ಒಕ್ಕಲೆಬ್ಬಿಸುವ ಹುನ್ನಾರ ನಡೆಯುತ್ತಿದೆ ಎಂದು ದೂರಿದ ಅವರು, ಇದರಿಂದ ಆ ಜನರು ಭಯಭೀತರಾಗಿದ್ದಾರೆ. ಆದ್ದರಿಂದ ಸರ್ಕಾರ ರಚನೆ ಮಾಡಿರುವ ಸಮಿತಿಯಿಂದ ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

# ಮನೆ ಬೀಗ ಮುರಿದು ಬೆಳ್ಳಿ ಆಭರಣ ಕಳವು

ಅರಸೀಕೆರೆ: ಇಲ್ಲಿನ ಮಲ್ಲೇಶ್ವರ ನಗರದಲ್ಲಿ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 48 ಸಾವಿರ ರೂ. ಮೌಲ್ಯದ ಬೆಳ್ಳಿ ಹಾಗೂ ಚಿನ್ನಾಭರಣ ಕದ್ದಿದ್ದಾರೆ.

ಬಸವರಾಜು ಎಂಬುವರ ಮನೆಯಲ್ಲಿ ಸೆ. 30 ರಿಂದ ಅ. 3ರ ನಡುವೆ ಘಟನೆ ನಡೆದಿದೆ. ಬಸವಾಜು ಅವರು ಮನೆಗೆ ಬೀಗ ಹಾಕಿಕೊಂಡು ದಸರಾ ಹಬ್ಬದ ಹಿನ್ನಲೆಯಲ್ಲಿ ಬೆಂಗಳೂರಿಗೆ ತೆರಳಿದ್ದರು. ಅ. 3 ರಂದು ವಾಪಾಸ್ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 4,500 ರೂ. ನಗದು, 8 ಗ್ರಾಂ ತೂಕದ 2 ಬೆಳ್ಳಿ ಕುಂಕುಮ ಬಟ್ಟಲು, 250 ಗ್ರಾಂ ತೂಕದ 2 ಬೆಳ್ಳಿ ದೀಪದ ಕಂಬ, 5 ಗ್ರಾಂ ತೂಕದ ಚಿನ್ನದ ಒಂದು ಜೊತೆ ಓಲೆ ಕಳವು ಮಾಡಲಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅಧಿದೇವತೆ ಹಾಸನಾಂಬ ಜಾತ್ರೆಗೆ ದಿನಗಣನೆ

## 30 ಕಿ.ಮೀ. ಬ್ಯಾರಿಕೇಡ್ ವ್ಯವಸ್ಥೆ । ದೇಗುಲದಲ್ಲಿ ಎಸಿ ಅಳವಡಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವರ್ಷಕ್ಕೊಮ್ಮೆ ದರ್ಶನ ಭಾಗ್ಯ ಕರುಣಿಸುವ ಶಕ್ತಿ ದೇವತೆ ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ದಿನಗಣನೆ ಶುರುವಾಗಿದ್ದು ಜಿಲ್ಲಾಡಳಿತ ಭರದ ಸಿದ್ಧತೆ ನಡೆಸುತ್ತಿದೆ.

ಈ ಬಾರಿಯೂ ದೇವಿ ದರ್ಶನದ ಜೊತೆಗೆ ಟೂರ್ ಪ್ಯಾಕೇಜ್, ಸಾಂಸ್ಕೃತಿಕ ಕಾರ್ಯಕ್ರಮ ಹಮಿಕೊಳ್ಳಲಾಗಿದೆ. ಅ.9 ರಂದು ಹಾಸನಾಂಬ ದೇಗುಲದ ಗರ್ಭಗುಡಿ ಬಾಗಿಲು ಶಾಸ್ತ್ರೋಕ್ತವಾಗಿ ತೆರೆಯಲಿದ್ದು, ಅ.23 ರಂದು ಬಾಗಿಲು ಮುಚ್ಚಲಿದೆ. ಅ. 9 ಮತ್ತು 23ರಂದು ಸಾರ್ವಜನಿಕ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಉಳಿದ ಎಲ್ಲಾ ದಿನ ನೈವೇದ್ಯ ಸಮಯ ಹೊರತುಪಡಿಸಿ ಸಾರ್ವಜನಿಕರ ದರ್ಶನಕ್ಕೆ



ಅವಕಾಶ ಮಾಡಿಕೊಡಲಾಗಿದೆ.

**ಅಧಿಕಾರಿಗಳ ಸರಣಿ ಸಭೆ:**

ರಾಜ್ಯ ಮಾತ್ರವಲ್ಲದೆ ಹೊರ ರಾಜ್ಯಗಳಿಂದಲೂ ಭಕ್ತರು ಆಗಮಿಸುವುದರಿಂದ ಯಾವುದೇ ಗೊಂದಲ ಆಗದಂತೆ ಅಚ್ಚುಕಟ್ಟು ಕಾರ್ಯಕ್ರಮಕ್ಕೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗಮನ ಹರಿಸಿದ್ದಾರೆ. ಕಳೆದ ವರ್ಷ ಬೇಕಾಬಿಟ್ಟಿ ಪಾಸ್ ವಿತರಿಸಿದ್ದರಿಂದ ಭಾರೀ ಗೊಂದಲವಾಗಿತ್ತು. ಅಂತಹ ಪ್ರಮಾದ ಮರುಕಳಿಸದಂತೆ ಎಚ್ಚರ ವಹಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಮೂರು ಸಭೆ ನಡೆಸಿದ್ದಾರೆ. ಜಿಲ್ಲೆಯ ಜನಪ್ರತಿನಿಧಿಗಳೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಿ ಎಲ್ಲರ ವಿಶ್ವಾಸ ಪಡೆದಿದ್ದಾರೆ. ಮತ್ತೊಂದೆಡೆ ಜಿಲ್ಲಾಧಿಕಾರಿ ಕೆ. ಎಸ್. ಲತಾಕುಮಾರಿ ಹಲವು ಬಾರಿ ಸ್ಥಳ ಪರಿಶೀಲಿಸಿ ಸಿದ್ಧತೆ ಪರಿಶೀಲನೆ ನಡೆಸುತ್ತಿದ್ದಾರೆ.

ಈಗಾಗಲೇ ದೇವಸ್ಥಾನಕ್ಕೆ ಬಣ್ಣ ಬಳಿಯುವ ಕಾರ್ಯ ಪೂರ್ಣಗೊಂಡು, ಆಹ್ವಾನ ಪತ್ರಿಕೆಗಳ ಹಂಚಿಕೆ ಕಾರ್ಯವೂ ನಡೆಯುತ್ತಿದೆ. ಹಾಸನ ನಗರದ ಹಲವೆಡೆ ಸ್ವಾಗತ ಕಮಾನು, ಇಡೀ ನಗರದಾದ್ಯಂತ ಲೈಟಿಂಗ್, ಎಲ್‌ಇಡಿ ಅಳವಡಿಕೆ, ರಸ್ತೆ ಗುಂಡಿ ಮುಚ್ಚುವ ಕಾರ್ಯ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಬ್ಯಾರಿಕೇಡ್, ಮ್ಯಾಟ್ ಸೇರಿ ಬರುವ ಭಕ್ತರಿಗೆ ಎಲ್ಲಾ ರೀತಿಯ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಜಿಲ್ಲಾಡಳಿತ ಕ್ರಮ ಕೈಗೊಂಡಿದೆ.

**ಭಕ್ತರ ಸಂಖ್ಯೆ ಹೆಚ್ಚುವ ನಿರೀಕ್ಷೆ :**

ಕಳೆದ ವರ್ಷ 20 ಲಕ್ಷಕ್ಕೂ ಹೆಚ್ಚು ಭಕ್ತರು ದೇವಿಯ ದರ್ಶನ ಪಡೆದಿದ್ದರು. ಈ ಬಾರಿ ಸಂಖ್ಯೆಯಲ್ಲಿ ಹೆಚ್ಚುವ ಸಾಧ್ಯತೆಯಿದ್ದು ದೇವಿ ದರ್ಶನದ ಸಮಯವೂ ಹೆಚ್ಚಿದೆ. ನೂಕುನುಗ್ಗಲು ಆಗದಂತೆ, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಅಗತ್ಯ ಕ್ರಮಕ್ಕೆ ಮುಂದಾಗಿದೆ. ವಿಶೇಷ ದರ್ಶನಕ್ಕೆ ಬರುವಂತಹ ಭಕ್ತರಿಗೆ 300 ರೂ. ಹಾಗೂ 1000 ರೂ. ಪಾಸ್ ವ್ಯವಸ್ಥೆ ಮಾಡಲಾಗಿದೆ. ಇದೇ ಮೊದಲ ಬಾರಿಗೆ ವಿಐಪಿ, ವಿವಿಐಪಿ ಪಾಸ್‌ಗಳನ್ನು ರದ್ದು ಮಾಡಿದ್ದು ಗೋಲ್ಡ್ ಪಾಸ್ ಜಾರಿಗೆ ತರಲಾಗಿದೆ. ಒಂದು ಪಾಸ್‌ಗೆ ಒಬ್ಬರಿಗೆ ಮಾತ್ರ ಅವಕಾಶವಿದ್ದು ದಿನದಲ್ಲಿ ಎರಡು ಗಂಟೆ ಮಾತ್ರ ದೇವಿ ದರ್ಶನಕ್ಕೆ ಅವಕಾಶ ನೀಡಲಾಗಿದೆ. ದರ್ಶನಕ್ಕೆ ಬರುವಂತಹ ವೃದ್ಧರು ಮತ್ತು ಅಂಗವಿಕಲರನ್ನು ದೇವೊ ದರ್ಶನಕ್ಕೆ ಕರೆದುಕೊಂಡು ಹೋಗಲು ವ್ಯವಸ್ಥೆ ಕಲ್ಪಿಸಲಾಗಿದೆ. ಸುಗಮ ದರ್ಶನಕ್ಕಾಗಿ ಜನದಟ್ಟಣೆ ಉಂಟಾಗುವುದನ್ನು ತಪ್ಪಿಸಲು ದೇವಾಲಯದಿಂದ 30 ಕಿ.ಮೀ. ಬ್ಯಾರಿಕೇಡ್ ವ್ಯವಸ್ಥೆ, ಜರ್ಮನ್ ಟೆಂಟ್, ನೆಲಕ್ಕೆ ಮ್ಯಾಟ್, 100ಕ್ಕೂ ಹೆಚ್ಚು ತಾತ್ಕಾಲಿಕ ಶೌಚಾಲಯಗಳ ಅಳವಡಿಕೆ ಕಾರ್ಯ ನಡೆಯುತ್ತಿದೆ.

ಸರದಿ ಸಾಲಿನಲ್ಲಿ ಬರುವ ಭಕ್ತರಿಗೆ ತೊಂದರೆಯಾಗದಂತೆ ಫ್ಯಾನ್, ಗರ್ಭಗುಡಿ ಮುಂಭಾಗ ಎಸಿ, ಭಕ್ತರಿಗೆ ಕುಡಿಯಲು ನೀರು ಮತ್ತು ಮಜ್ಜಿಗೆ ನೀಡಲು ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ದೇವಾಲಯದ ಒಳಗೆ ಮತ್ತು ಹೊರಗೆ ಆಕರ್ಷಣೆಯವಾಗಿ ಮತ್ತು ವಿಭಿನ್ನವಾಗಿ ಹೂವಿನ ಅಲಂಕಾರ ಮಾಡಲು ಕ್ರಮ ವಹಿಸಲಾಗಿದೆ.

# ಗಾಳಿ–ಮಳೆಗೆ ಧರೆಗುರುಳಿದ ಮರ, ವಿದ್ಯುತ್ ಕಂಬ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನಲ್ಲಿ ಕಳೆದ ಒಂದು ವಾರದಿಂದ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಜನಜೀವನ ನಲುಗಿ ಹೋಗಿದೆ.

ಹೆತ್ತೂರು ಗ್ರಾಮದಲ್ಲಿ ನಿರಂತರವಾಗಿ ಬೀಳುತ್ತಿರುವ ಗಾಳಿಮಳೆಗೆ ಮರ ಬಿದ್ದು 5 ವಿದ್ಯುತ್ ಕಂಬಗಳು ಧರೆಗುರುಳಿದ ಪರಿಣಾಮ ಗುರುವಾರ ರಾತ್ರಿ ಹಾಡ್ಲಹಳ್ಳಿ–ಹೆತ್ತೂರು ಮುಖ್ಯ ರಸ್ತೆಯಲ್ಲಿ ಕೆಲ ಕಾಲ ಸಂಚಾರ ಬಂದ್ ಆಗಿತ್ತು. ರಾತ್ರಿ ವೇಳೆಯಲ್ಲೇ ಗ್ರಾಮಸ್ಥರು ಮರ ತೆರವುಗೊಳಿಸಿ ತಾತ್ಕಾಲಿಕವಾಗಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ವಿದ್ಯುತ್ ಕಂಬಗಳ ಜೊತೆ ಮರಗಳು ನೆಲಕ್ಕುರುಳಿ ಹೆತ್ತೂರು ಸೇರಿ ಹಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತ ಉಂಟಾಗಿತ್ತು. ರಕ್ಷಣಾ ಸಿಬ್ಬಂದಿ ರಾತ್ರಿಯಿಡಿ ಮರ ತೆರವು ಕಾರ್ಯ ನಡೆಸಿದರು. ವಿದ್ಯುತ್ ಸಂಪರ್ಕ ಕಡಿತವಾಗಿದ್ದರಿಂದ ಜನರು ಕತ್ತಲೆಯಲ್ಲಿ ಕಾಲ ಕಳೆಯುವಂತಾಯಿತು.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹೆತ್ತೂರು ಹೋಬಳಿ ಭಾಗದಲ್ಲಿ ಅರ್ಧ ಇಂಚು ಮಳೆಯಾಗಿದೆ. ಉಳಿದಂತೆ ಯಸಳೂರು, ಹಾನುಬಾಳು ಹೋಬಳಿ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ತಾಲ್ಲೂಕಿನಾದ್ಯಂತ ಮೋಡಕವಿದ ವಾತಾವರಣವಿದ್ದು, ಆಗಾಗ್ಗೆ ಸು–

# ನಾಳೆಯಿಂದ ಬೆಂಗಳೂರಿನಲ್ಲಿ ಹೊರ ಗುತ್ತಿಗೆ ನೌಕರರ ಧರಣಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಕರ್ನಾಟಕ ರಾಜ್ಯ ಹೊರಗುತ್ತಿಗೆ ನೌಕರರ ಸಂಘದ ವತಿಯಿಂದ ಅ. 6 ರಿಂದ ಅನಿರ್ದಿಷ್ಟಾವಧಿ ಮುಷ್ಕರ ಹಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಕೇಶವಮೂರ್ತಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರ ಗುತ್ತಿಗೆ ಪೌರ ನೀರು ಸರಬರಾಜು ನೌಕರರ ಬೇಡಿಕೆಗಳನ್ನು ಸರ್ಕಾರ ಈಡೇರಿಸದ ಹಿನ್ನೆಲೆಯಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆಯಲಾಗಿದೆ ಎಂದು ಹೇಳಿದರು.

ನೌಕರರ ಬೇಡಿಕೆಗಳಲ್ಲಿ ನೇರ ನೇಮಕಾತಿ, ನೇರ ಪಾವತಿ ಮತ್ತು ಸೇವಾ ಭದ್ರತೆ ಪ್ರಮುಖವಾಗಿದೆ. ಹಲವು ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ಸರ್ಕಾರ ಇನ್ನೂ ಭರ್ತಿ ಮಾಡಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ಇದುವರೆಗೆ ಯಾವಾಗಲೂ ಮುಷ್ಕರ ಕೈಗೊಂಡಿರದ ನೌಕರರು, ಸರ್ಕಾರದ ವಿಳಂಬ ಧೋರಣೆಯಿಂದ ಬೇಸತ್ತು ಈ ಬಾರಿ ಹೋರಾಟಕ್ಕೆ ಇಳಿಯುತ್ತಿದ್ದೇವೆ. ಸಮುದಾಯದ ನೀರಿನ ಪೂರೈಕೆ ಎಂಬ ಅತಿ ಮೂಲಭೂತ ಸೇವೆ ನಿರ್ವಹಿಸುತ್ತಿರುವ ನೌಕರರ ಬೇಡಿಕೆಗಳನ್ನು ತಕ್ಷಣವೇ ಸರ್ಕಾರ ಪರಿಗಣಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ ಎಂದರಲ್ಲದೆ ಈಗಾಗಲೇ 60 ಸಾವಿರ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದಾರೆ. ಹಲವಾರು ಬಾರಿ ಹಿಂದಿನ ಸರ್ಕಾರಕ್ಕೆ ಮನವಿ ಮಾಡಿದ್ದೆವು ಈಗಿರುವ ಪೌರಾಡಳಿತ ಸಚಿವರಲ್ಲಿ ಮನವಿ ಮಾಡಿದ್ದರು ಸಹ ಅದು ಮನವಿಗೆ ಸೀಮಿತವಾಗಿದೆ. ನಮ ಕಷ್ಟಗಳಿಗೆ ಪರಿಹಾರ ಸಿಕ್ಕಿಲ್ಲ. ಇಡಿ ರಾಜ್ಯದಲ್ಲಿ ನಾವು ಕೇವಲ 6 ಸಾವಿರ ನೀರು ಸರಬರಾಜುದಾರರಿದ್ದು ಬೇಲೂರು ಪುರಸಭೆಯಲ್ಲಿ 29 ಹೊರಗುತ್ತಿಗೆ ನೀರು ಸರಬರಾಜುದಾರರು ಕೆಲಸ ನಿರ್ವಹಿಸುತ್ತಿದೆ. ಇಲ್ಲಿವರೆಗೆ ನಮ್ಮ ಕಷ್ಟ ಸುಖಗಳನ್ನು ವಿಚಾರಿಸಲು ಸೌಜನ್ಯವಿಲ್ಲದ ಗುತ್ತಿಗೆದಾರರ ಬಳಿ ಕೆಲಸ ನಿರ್ವಹಿಸುತ್ತಿದ್ದೇವೆ. ಸುಮಾರು ಎರಡೂವರೆ ವರ್ಷಗಳಿಂದ ಗುತ್ತಿಗೆದಾರ ಪಿಎಫ್ ಹಾಗೂ ಪಿಎಸ್‌ಐಗಳನ್ನು ಕಟ್ಟಿಲ್ಲ. ನಮಗೆ ಏನೇ ತೊಂದರೆಯಾದರು ಅದಕ್ಕೆ ನಾವೇ ಜವಾಬ್ದಾರರು ಎಂದ ಅವರು ಹಬ್ಬ ಹರಿದಿನ ಕೊರೊನ ಸಂದರ್ಭದಲ್ಲಿ ನಮ ಜೀವದ ಹಂಗು ತೊರೆದು ನಾವು ಕೆಲಸ ಮಾಡಿದ್ದೇವೆ. ದಯಮಾಡಿ ಸರ್ಕಾರ ಹಾಗೂ ಜನಪ್ರತಿನಿಧಿಗಳು ನಮಗೆ ಸಹಾಯ ಮಾಡುವ ಮೂಲಕ ನಮ್ಮನ್ನು ಖಾಯಂ ನೌಕರರನ್ನಾಗಿ ಪರಿಗಣಿಸುವಂತೆ ಬೇಡಿಕೊಂಡರು.


ಸಂಘಟನಾ ಕಾರ್ಯದರ್ಶಿ ಸುನೀಲ್, ನಿರ್ದೇಶಕ ನರಸಿಂಹ ಹಾಗೂ ನರಸಿಂಹಸ್ವಾಮಿ ಹಾಜರಿದ್ದರು.

# ಹಿಂದು ಸಂಪ್ರದಾಯದ ಆಚಾರ ವಿಚಾರ ಉಳಿಸೋಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಿಂದು ಸಂಪ್ರದಾಯದ ಆಚಾರ ವಿಚಾರಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ ತಿಳಿಸಿದರು.

ಪಟ್ಟಣದ ಬಾಗೂರು ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ವನಿತಾ ಮಹಿಳಾ ಸಮಾಜ ವಾಸವಿ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿಜಯ ದಶಮಿ ಕೊನೆಯ ಪೂಜೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿ, ಹಿಂದು ಸಂಪ್ರದಾಯ ಪ್ರಕಾರ ಆಚಾರ ವಿಚಾರಗಳನ್ನು ಉಳಿಸಿಕೊಂಡು ಮತ್ತು ಬೆಳೆಸಿಕೊಂಡು ಹೋಗುವುದು ಉತ್ತಮವಾಗಿದೆ. ಅದರಿಂದ ಹಿಂದುತ್ವ ಮತ್ತು ನಮ ಪೂರ್ವಜರ ಆಚಾರ ವಿಚಾರಗಳು ಉಳಿಯಲು ಸಹಕಾರಿಯಾಗುತ್ತದೆ. ಈಗಿನ ಕಾಲದಲ್ಲಿ ಆಚಾರ ವಿಚಾರಗಳು ದಿನೇ ದಿನೇ ಕಡಿಮೆ ಆಗುತ್ತಾ ಬರುತ್ತಿವೆ. ಆದರೆ ನಮ ಆರ್ಯವೈಶ್ಯ ಸಮಾಜದ



ಮಹಿಳೆಯರು ಮತ್ತು ಪುರುಷರು ಅಂದಿನ ಆಚಾರ ವಿಚಾರ ಮತ್ತು ಸಂಪ್ರದಾಯಗಳನ್ನು ಇಂದಿಗೂ ಕೂಡ ಪಾಲನೆ ಮಾಡುತ್ತಿರುವುದು ಸಂತೋಷದ ವಿಚಾರವಾಗಿದೆ.

ಅದರಲ್ಲೂ ನವರಾತ್ರಿ ಸಮಯದಲ್ಲಿ ಪ್ರತಿನಿತ್ಯ ಅಮ್ಮನವರಿಗೆ ನಿತ್ಯ ಮಾಡುತ್ತಿದ್ದಂತಹ ವಿಭಿನ್ನ ಅಲಂಕಾರವು ವಿಶೇಷವಾಗಿತ್ತು. ಮಹಿಳೆಯರೂ ಕೂಡ ವಿವಿಧ ಅಲಂಕಾರವನ್ನು ಮಾಡಿಕೊಂಡು ದೇವರ ಪೂಜೆಗೆ ಆಗಮಿಸಿರುವುದು ಒಂದು ವಿಶಿಷ್ಟತೆಯನ್ನು ತೋರಿದೆ. ಅದರಲ್ಲೂ ಎಲ್ಲಾ ದೇವಾಲಯಗಳು ವನಿತ ಮಹಿಳಾ ಸಂಘದವರು ಮಾಡುವಂತಹ ಭಜನಾ ಕಾರ್ಯಕ್ರಮವು ತಾಲೂಕಿನಲ್ಲಿ ವಿಶೇಷವಾಗಿದೆ ಎಂದರು.

ಡಿವೈಎಸ್ಪಿ ಎನ್. ಕುಮಾರ್, ನಗರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ರಘುಪತಿ ಭಟ್, ತಾಲ್ಲೂಕು ಆಟೋ ಚಾಲಕರ ಸಂಘದ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷ ಬಾಬು ಇವರಿಗೆ ಆರ್ಯ ವೈಶ್ಯ ಸಮಾಜದ ವತಿಯಿಂದ ಸನಾನಿಸಲಾಯಿತು.

ವಾಸವಿ ಸೇವಾ ಟ್ರಸ್ಟಿನ ಅಧ್ಯಕ್ಷರಾದ ಬಾಬು, ಗೌರವ ಅಧ್ಯಕ್ಷ ಗಿರೀಶ್, ಕಾರ್ಯದರ್ಶಿ ಮನೋಹರ್, ವಾಸವಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ವಿನಯ್ ಕುಮಾರ್, ರಾಘವೇಂದ್ರ, ರಮೇಶ್, ಶ್ರೀನಿವಾಸ್, ಕೃಷ್ಣ, ರವಿ, ನಾಗೇಂದ್ರ ಮುಂತಾದವರು ಹಾಜರಿದ್ದರು.

# ಚಾರ್ಲಿ 777 ಹಿಂದಿಕ್ಕಿ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾದ ದೊಡ್ಡ ಹಟ್ಟಿ ಬೋರೇಗೌಡ




2021ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟವಾಗಿದೆ. ರಘು ಕೆ.ಎಂ. ನಿರ್ದೇಶನದ ದೊಡ್ಡ ಹಟ್ಟಿ ಬೋರೇಗೌಡ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಗಿದೆ . ಆದರೆ ಚಾರ್ಲಿ 777 ದ್ವಿತೀಯ ಅತ್ಯುತ್ತಮ ಚಿತ್ರದ ಜೊತೆ ಚಿತ್ರದ ನಾಯಕ ರಕ್ಷಿತ್ ಶೆಟ್ಟಿಗೆ ಅತ್ಯುತ್ತಮ ನಟ ಪ್ರಶಸ್ತಿ ಸಂದಿದೆ.ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಗಡಿ ಪ್ರದೇಶವಾದ ಕೇರಳಾಪುರ ಕಾಳೇನಹಳ್ಳಿ ಸುತ್ತಮುತ್ತ ಚಿತ್ರಣವಾದ ದೊಡ್ಡಟ್ಟಿ ಬೋರೇಗೌಡ ಚಿತ್ರ, ನನ್ನ ಗಮನ ಸೆಳೆಯಲು ಕಾರಣ ನನ್ನ ತಾಯಿಯ ಬಂಧುಗಳೆಲ್ಲ ಆ ಪ್ರದೇಶದಲ್ಲಿ ವಾಸವಿದ್ದಾರೆ. ಅಲ್ಲಿನ ಪ್ರದೇಶ, ಪ್ರಾದೇಶಿಕ ಭಾಷೆಯನ್ನು ನಿರ್ದೇಶಕರು ಚೆನ್ನಾಗಿ ಬಳಸಿಕೊಂಡಿದ್ದಾರೆ. ನಮ್ಮ ಊರಿಗಿಂತ 30 ದೂರದಲ್ಲಿರುವ ಪ್ರದೇಶದ ಭಾಷಾಭಿನ್ನತೆ ಅಚ್ಚರಿ ಮೂಡಿಸುತ್ತದೆ.

ಚಿತ್ರದ ಕಥೆ ತುಂಬಾ ಸರಳ. ಆಶ್ರಯ ಮನೆ ಒಂದನ್ನು ಪಡೆಯಲು ಒಂದು ಕಾಲದಲ್ಲಿ ಚೆನ್ನಾಗಿ ಬದುಕಿ ಬಾಳಿದ ದೊಡ್ಡ ಹಟ್ಟಿ ಬೋರೇಗೌಡ ಪಡುವ ಪಡಿಪಾಟಲು ಚಿತ್ರದ ಕಥೆ. ಬೇರು ಮಟ್ಟದಲ್ಲಿ ಬೇರೂರಿರುವ ಭ್ರಷ್ಟಾಚಾರ ಹಾಗೂ ಆಧುನಿಕ ಗ್ರಾಮೀಣ ಕೌಟುಂಬಿಕ ವ್ಯವಸ್ಥೆ ಸಹಜವಾಗಿ ಚಿತ್ರದಲ್ಲಿ ಮೂಡಿ ಬಂದಿದೆ. ಬೋರೇಗೌಡನ ಕಾಲಿಗೆ ಹೊಕ್ಕ ಮುಳ್ಳನ್ನು ಈ ಭ್ರಷ್ಟತೆಗೆ ರೂಪಕವಾಗಿ ಬಳಸಲಾಗಿದೆ. ಮದ್ಯಪಾನ ಮತ್ತು ಜೂಜಿ ಗೆ ಗ್ರಾಮ ಸಮುದಾಯ ಸಿಲುಕಿರುವುದನ್ನು ಕೂಡ ಚಿತ್ರ ಪಡಿ ಮೂಡಿಸಿದೆ. ಚಿತ್ರದ ಕಲಾವಿದರೆಲ್ಲರೂ ಸಹಜವಾಗಿ ಅಭಿನಯಿಸಿದ್ದಾರೆ. ಸಿನಿಮಾದ ಕಥಾ ನಿರೂಪಣೆ ತಿಥಿ ಚಿತ್ರದ ಮಾದರಿಯಲ್ಲಿದೆ. ಆದರೆ ತಿಥಿ ಚಿತ್ರಕ್ಕೂ ಈ ಚಿತ್ರಕ್ಕೂ ಒಂದು ವ್ಯತ್ಯಾಸ ಎಂದರೆ ತಿಥಿ ಚಿತ್ರ ಊರಿನ ಪಕ್ಕ ಹರಿಯುವ ನದಿಯ ಹಾಗೆ ಸಹಜವಾಗಿ ಹರಿದರೆ ಅಣೆಕಟ್ಟು ಕಟ್ಟಿ ಆ ನೀರನ್ನು ತಮ ಇಷ್ಟಕ್ಕನುಸಾರವಾಗಿ ಬೇರೆಡೆಗೆ ಹರಿಸುವಂತೆ ಈ ಚಿತ್ರದ ಅಂತ್ಯದಲ್ಲಿ ನಿರ್ದೇಶಕರು ಪ್ರವೇಶಿಸಿ ಅಸಹಜ ಕ್ಲೈಮಾಕ್ಸ್‌ತಂದಿದ್ದಾರೆ ಎನಿಸದಿರದು. ಉಳಿದಂತೆ ನಿರ್ದೇಶಕ ಕೆ.ಎಂ. ರಘು ಪ್ರಯತ್ನ ಶ್ಲಾಘನೀಯ. ಇದೇ ನಿರ್ದೇಶಕರು ಪರಸಂಗ, ಗಡ್ಡಪ್ಪನ ಸರ್ಕಲ್ ನಿರ್ದೇಶಿಸಿದ್ದಾರೆ. ಕಡಿಮೆ ಬಜೆಟ್ ನ ಇಂಥ ಚಿತ್ರಗಳು ಇತ್ತೀಚೆಗೆ ಹೆಚ್ಚು ಗಮನ ಸೆಳೆಯುತ್ತಿವೆ. ಬಹುತೇಕ ಇಂತಹ ಚಿತ್ರಗಳ ನಿರ್ದೇಶಕರು ನಿರೂಪಣಾ ತಂತ್ರವಾಗಿ ಚಿತ್ರವನ್ನು ಬಳಸಿದರೂ ಕಥೆ ಎಷ್ಟು ಮುಖ್ಯ ಎಂಬುದಕ್ಕೆ ತಿಥಿ ಚಿತ್ರ ಮಾದರಿಯಾಗಿದೆ. ಚಿತ್ರ ಯೂಟ್ಯೂಬ್ ನಲ್ಲಿ ಲಭ್ಯವಿದೆ

–ಗೊರೂರು ಶಿವೇಶ್

# ಉಪವಾಸದ ಬಾಲ ಪಾಠ

ರಾತ್ರಿಯಿಡೀ ಮಳೆ ಮಳೆ ಸುರಿದಿತ್ತು. ಮಳೆ ನೀರಿನಲ್ಲಿ ಆಟವಾಡುವುದೆಂದರೆ ಮೋನು ಪಾಪುವಿಗೆ ಬಹಳ ಇಷ್ಟ. ಆದರೆ, ಅವನು ನೀರಿನಲ್ಲಿ ಆಟವಾಡುತ್ತಿರುವುದು ರಂಭತೆಯ ಕಣ್ಣಿಗೇನಾದರೂ ಬಿತ್ತು ಅಂದರೆ ಮುಗಿಯಿತು.

ರಟ್ಟೆ ಹಿಡಿದು ದರದರನೆ ಎಳೆದು ಕೊಂಡು ಹೋಗಿ, ಒದ್ದೆಯಾಗಿದ್ದ ಕೈಕಾಲುಗಳನ್ನು ಒರಸಿ ಮಂಚದ ಮೇಲೆ ಮಲಗಿಸಿ ಬಾಗಿಲು ಮುಚ್ಚಿ, ಹೊರಗಿನಿಂದ ಚಿಲಕ ಹಾಕಿಬಿಡುತ್ತಿದ್ದಳು. ಇವತ್ತೂ ಹಾಗೇ ಆಯಿತು.

ಆದರೆ, ಮೋನು ಪಾಪು ಅಳಲಿಲ್ಲ, ಚೀರಾಡಲಿಲ್ಲ. ಆದರೆ ಸಂಜೆಯ ಹೊತ್ತು ರಂಭತ್ತೆ ಲೋಟದಲ್ಲಿ ಹಾಲು ತುಂಬಿಸಿಕೊಂಡು ಕುಡಿಯೋ ಕಂದಾ, ಎನ್ನುತ್ತಾ ಹತ್ತಿರ ಬಂದಾಗ ಮಾತ್ರ ಅವರ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿ ತನ್ನ ಕೋಪವನ್ನು ತೋರಿಸಿಬಿಟ್ಟಿದ್ದ. ಮೋನು ಪಾಪು ಯಾವಾಗಲೂ ಹಾಗೆಯೇ. ತನ್ನ ಇಷ್ಟದಂತೆ ನಡೆಯದಾಗ ಅವನು ಎಂದೂ ಅಳುತ್ತಿರಲಿಲ್ಲ. ಗಲಾಟೆ ಮಾಡುತ್ತಿರಲಿಲ್ಲ. ಆ ದಿನವಿಡೀ ಉಪವಾಸ ಇದ್ದು ತನ್ನ ಪ್ರತಿಭಟನೆಯನ್ನು ತೋರಿಸುತ್ತಿದ್ದ.

**ಎಷ್ಟೇ ಕಷ್ಟ ಬಂದರೂ ಸುಳ್ಳು ಹೇಳಲಾರೆ:**

ಮೋನುವಿನ ತಾಯಿ ಪುತಲೀಬಾಯಿಯವರು ಪ್ರತಿ ಮಳೆಗಾಲದ ಚಾತುರ್ಮಾಸದಲ್ಲಿ ಉಪವಾಸ ವ್ರತವನ್ನು ನಿಷ್ಠೆಯಿಂದ ಆಚರಿಸುತ್ತಿದ್ದರು. ಜ್ವರ ಬಂದ ದಿನಗಳಲ್ಲೂ ಸೂರ್ಯೋದಯವನ್ನು ಕಾಣದೆ ಆಹಾರ ಮುಟ್ಟುತ್ತಿರಲಿಲ್ಲ.

ಒಂದು ದಿನ ಆಕಾಶದಲ್ಲಿ ದಟ್ಟ ಮೋಡಗಳು ತೇಲುತ್ತಿದ್ದವು. ಸೂರ್ಯೋದಯದ ಸಮಯವಾಗಿದ್ದರೂ ಸೂರ್ಯ ಕಾಣಿಸುತ್ತಿರಲಿಲ್ಲ. ತಾಯಿಯನ್ನು ಬೇಗ ಊಟ ಮಾಡಿಸುವ ಒಂದೇ ಆಸೆಯಿಂದ ಮೋನು ಪಾಪು ಉಪಾಯ ಮಾಡಿದ.

ತಾಯಿಗೆ ಕೇಳಿಸುವಂತೆ ಗಟ್ಟಿಯಾಗಿ,'ಓ ಸೂರ್ಯ ಕಾಣಿಸಿದ ! ಸೂರ್ಯ ಉದಯಿಸಿದ !' ಎಂದು ಸುಳ್ಳೇ ಸುಳ್ಳು ಕಿರುಚುತ್ತಾ ಒಳಕೋಣೆಗೆ ಧಾವಿಸಿ ಬಂದ, ಆದರೆ ಮಗ ಸುಳ್ಳು ಹೇಳುತ್ತಿದಾನೆಂಬುದು ತಾಯಿ ತಿಳಿದುಬಿಟ್ಟಿತ್ತು, ಮಳೆಗಾಲದ ದಿನಗಳಲ್ಲಿ, ಕಪ್ಪು ಮೋಡಗಳು ಕವಿದಿರುವಾಗ ಸೂರ್ಯ ಕಾಣಲು ಸಾಧ್ಯವಿಲ್ಲ ಎಂಬುದು ಅವರಿಗೆ ಗೊತ್ತಿತ್ತು. ಮಗನಿಗೆ ಬುದ್ಧಿ ಕಲಿಸಲು ಅವರೂ ಒಂದು ಉಪಾಯ ಮಾಡಿದರು.

ತಮ ಬಲಗೈಯನ್ನು ಮುಂದಕ್ಕೆ ಚಾಚಿ ಹೇಳಿದರು, 'ಮೋನು, ನನ್ನ ಬಲಗೈಯನ್ನು ಚಾಚಿಕೊಂಡು ಕಣ್ಣು ನಾನು ಮುಚ್ಚಿಕೊಳ್ಳುವೆ. ಸೂರ್ಯ ಉದಯಿಸಿದ್ದನ್ನು ನೀನು ನೋಡಿದ್ದು ನಿಜವಾಗಿದ್ದರೆ ನನ್ನ ಕೈಯ್ಯನ್ನು ನಿನ್ನ ಬಲಗೈಯಲ್ಲಿ ಮುಟ್ಟಬೇಕು. ಸುಳ್ಳು ಹೇಳಿದ್ದರೆ ಎಡಗೈಯ್ಯಲ್ಲಿ ಮುಟ್ಟಬೇಕು. ನೀನು ಹೇಳಿದ್ದು ನಿಜವೋ ಸುಳ್ಳೋ ಎಂಬುದು ಕಣ್ಣು ಮುಚ್ಚಿಕೊಂಡಿರುವ ನನಗೆ ಕಾಣಿಸುವುದಿಲ್ಲ' ಎಂದು ಹೇಳಿ ಕಣ್ಣು ಮುಚ್ಚಿಕೊಂಡರು.



ಮೋನು ಪಾಪುವಿಗೆ ತನ್ನ ತಪ್ಪಿನ ಅರಿವಾಗಿತ್ತು. ತಾಯಿಯ ಕೈ ಮುಟ್ಟಲು ಭಯವಾಯಿತು.

ಬಹಳ ಹೊತ್ತಾದರೂ ಮೋನು ಪಾಪು ತಮ ಕೈಯನ್ನು ಮುಟ್ಟದಿದ್ದಾಗ ತಾಯಿಗೆ ಸಂತೋಷವಾಯಿತು. ತಪ್ಪನ್ನು ಒಪ್ಪಿಕೊಂಡ ಮಗನ ಬಗ್ಗೆ ಹೆಮೆ ಅನ್ನಿಸಿತು. ಮುಚ್ಚಿದ್ದ ತಮ ಕಣ್ಣುಗಳನ್ನು ತೆರೆದು, ಯಾವುದೇ ಕಾರಣಕ್ಕೂ ಸುಳ್ಳು ಹೇಳಬಾರದು ಮಗು' ಎಂದು ಹೇಳಿ ಪಾಪುವನ್ನು ಎದೆಗೆ ಅಪ್ಪಿಕೊಂಡರು. ಮೋನುಪಾಪ ಅಂದೆ ಶಪಥ ಮಾಡಿಬಿಟ್ಟಿದ್ದನು. ಎಷ್ಟೇ ಕಷ್ಟ ಎದುರಾದರೂ ಇನ್ನು ಮುಂದೆ ಸುಳ್ಳು ಹೇಳುವುದಿಲ್ಲ. ಪರೀಕ್ಷೆಯಲ್ಲಿ ನಕಲು ಮಾಡಲಾರೆ:

ಮೋಹನನು ರಾಜಕೋಟೆಯಲ್ಲಿ ಪ್ರೌಢ ಶಾಲೆಯಲ್ಲಿ ಓದುತ್ತಿದ್ದ ದಿನಗಳಲ್ಲೊಮೆ ಗೈಲ್ಸ್ ಶಿಕ್ಷಣಾಧಿಕಾರಿಯು ಶಾಲೆಯ ತಪಾಸಣೆಗೆಂದು ಬಂದಿದ್ದರು. ಬ್ರಿಟಿಷ್ ವಿದ್ಯಾರ್ಥಿಗಳ ಅಕ್ಷರ ಜ್ಞಾನವನ್ನು ಪರಿಶೀಲಿಸುವ ಸಲುವಾಗಿ ಐದು ಇಂಗ್ಲಿಷ್ ಪದಗಳನ್ನು ಹೇಳಿ, ತಪ್ಪಿಲ್ಲದೆ ಬರೆಯುವಂತೆ ಸೂಚಿಸಿದ್ದರು.

ಮೋಹನನಿಗೆ ಕೆಟಲ್ ಎಂಬ ಇಂಗ್ಲಿಷ್ ಪದವನ್ನು ಸರಿಯಾಗಿ ಬರೆಯಲು ಬರುತ್ತಿದ್ದರೂ, ಬರೆಯುವಾಗ ಒಂದು ಅಕ್ಷರವನ್ನು ತಪ್ಪಾಗಿ ಬರೆದುಬಿಟ್ಟಿದ್ದನು. ಅವನು ತಪ್ಪಾಗಿ ಬರೆದಿರುವುದು ತರಗತಿಯ ಶಿಕ್ಷಕರ ಕಣ್ಣಿಗೆ ಬಿದ್ದಿತ್ತು. ತನ್ನ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೂ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಸಿರುವೆ ಎಂಬುದಾಗಿ ಆ ಬ್ರಿಟಿಷ್ ಶಿಕ್ಷಣಾಧಿಕಾರಿಯವರಿಗೆ ಗೊತ್ತು ಮಾಡಿ ಮೆಚ್ಚುಗೆ ಗಳಿಸಬಯಸಿದ್ದರು ಆ ಶಿಕ್ಷಕರು, ಅವರು ಮೋಹನನ ಬಳಿಗೆ ಬಂದು ನಿಂತರು. ತಮ ಕಾಲಿನ ಬೆರಳುಗಳ ತುದಿಯಿಂದ ಮೋಹನನ ಕಾಲನ್ನು ತಡವಿ, ಪಕ್ಕದ ಹುಡುಗನ ಬರಹವನ್ನು ನೋಡಿ ತಪ್ಪಾಗಿ ಬರೆದ ಪದವನ್ನು ತಿದ್ದಿಕೊಳ್ಳುವಂತೆ ಕಣ್ಣುಗಳಲ್ಲಿ ಸೂಚಿಸಿದ್ದರು.

ಆದರೆ, ಬೇರೆಯವರ ಉತ್ತರ ಪತ್ರಿಕೆಯಿಂದ ನಕಲು ಮಾಡಲು ಮೋಹನನು ಒಪ್ಪಲಿಲ್ಲ. ತಮ್ಮ ಸಲಹೆಯನ್ನು ತಿರಸ್ಕರಿಸಿದ ಮೋಹನನ ಬಗ್ಗೆ ಶಿಕ್ಷಕರಿಗೆ ಬಹಳ ಸಿಟ್ಟು ಬಂದಿತ್ತು.ಪರೀಕ್ಷೆ ಮುಗಿದ ಬಳಿಕ ಮೋಹನನನ್ನು ಕರೆಸಿಕೊಂಡು ಗದರಿಸಿದ್ದರು.

ಆದರೆ, ಮೋಹನನಿಗೆ ಮಾತ್ರ ಶಿಕ್ಷಕರ ಮೇಲಿನ ಗೌರವ ಕಡಮೆಯಾಗಲಿಲ್ಲ. ಯಾಕೆಂದರೆ, 'ಹಿರಿಯರ ಒಳ್ಳೆಯತನವನ್ನು ಮಾತ್ರ ಕಲಿಯಬೇಕೇ ಹೊರತು, ಅವರ ಗುಣಾವಗುಣಗಳನ್ನು ಅಲ್ಲ' ಎಂದು ತಾಯಿ ಹೇಳುತ್ತಿದ್ದ ಮಾತನ್ನು ಮೋಹನನು ಚಾಚು ತಪ್ಪದೆ ಪಾಲಿಸುತ್ತಿದ್ದನು.

–ವಿಶ್ವಾಸ್ ಡಿ. ಗೌಡ

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್ 5

1910: ಪೋರ್ಚುಗಲ್‌ನಲ್ಲಿ ಗಣರಾಜ್ಯ ಸ್ಥಾಪನೆ. ರಾಜಮನೆತನದ ಆಳ್ವಿಕೆ ಕೊನೆಗೊಂಡಿತು.
1947: ಅಮೆರಿಕದ ಅಧ್ಯಕ್ಷ ಹ್ಯಾರಿ ಟ್ರೂಮನ್ ಅವರು ಶೀತಯುದ್ಧದ ಕಾಲದ ಟ್ರೂಮನ್ ಸಿದ್ಧಾಂತ ಘೋಷಿಸಿದರು.
1954: ಬಿಬಿಸಿ ತನ್ನ ಮೊದಲ ಟೆಲಿವಿಷನ್ ಸುದ್ದಿ ಪ್ರಸಾರ ಆರಂಭಿಸಿತು.
1984: ಭಾರತದ ಮಾಜಿ ಪ್ರಧಾನಿ ರಾಜೀವ್ ಗಾಂಧಿ, ತಾಯಿಯಾದ ಇಂದಿರಾ ಗಾಂಧಿಯವರ ನಿಧನದ ನಂತರ ಕಾಂಗ್ರೆಸ್ ಪಕ್ಷದ ನಾಯಕರಾಗಿ ಅಧಿಕೃತವಾಗಿ ಆಯ್ಕೆಯಾದರು.
2020: ನೋಬೆಲ್ ಶಾಂತಿ ಬಹುಮಾನವನ್ನು ವಿಶ್ವ ಆಹಾರ ಕಾರ್ಯಕ್ರಮಗೆ ಘೋಷಿಸಲಾಯಿತು.

### ಜನನ

1889: ಸತ್ಯೇಂದ್ರನಾಥ ಬೋಸ್, ಭಾರತೀಯ ಗಣಿತಜ್ಞ ಮತ್ತು ಭೌತಶಾಸ್ತ್ರಜ್ಞ
1864: ಕಾಶಿನಾಥ ಸಿಂಗ್, ಕವಿ ಮತ್ತು ಸಾಹಿತಿ
1919: ಎನ್ರಿಕೊ ಫರ್ಮಿ, ಇಟಲಿಯ ಖ್ಯಾತ ಭೌತಶಾಸ್ತ್ರಜ್ಞ, ಅಣುಶಕ್ತಿ ಪಿತಾಮಹ
1902: ರೇ ಕಾಕ್ಸ್, ಪ್ರಸಿದ್ಧ ಅಮೇರಿಕನ್ ನಟಿ
1952: ಕ್ಲೈವ್ ಬಾಕರ್ರ್, ಇಂಗ್ಲಿಷ್ ಲೇಖಕ ಮತ್ತು ಚಲನಚಿತ್ರ ನಿರ್ದೇಶಕ

### ಮರಣ

1548: ಕೋನ್ರಾಡ್ ಪೆಲಿಕಾನ್, ಸ್ವಿಸ್ ಧರ್ಮಶಾಸ್ತ್ರಜ್ಞ
1813: ಟೆಕಂಸೆಹ್, ಅಮೆರಿಕದ ಮೂಲ ನಿವಾಸಿ ನಾಯಕ
1894: ಆಲ್ಫ್ರೆಡ್ ನೋಬೆಲ್, ಸ್ವೀಡಿಷ್ ವಿಜ್ಞಾನಿ ಮತ್ತು ನೋಬೆಲ್ ಪ್ರಶಸ್ತಿ ಸ್ಥಾಪಕ
2000: ಕ್ರೊಯೇಷಿಯಾದ ಮಾಜಿ ಅಧ್ಯಕ್ಷ ಫ್ರಾಂಜೋ ತುಜ್‌ಮಾನ್
2011: ಸ್ಟೀವ್ ಜಾಬ್ಸ್, ಆಪಲ್ ಸಂಸ್ಥಾಪಕ ಮತ್ತು ತಂತ್ರಜ್ಞಾನ ಕ್ರಾಂತಿಕಾರಿ
2014: ಆರ್.ಕೆ. ಲಕ್ಷ್ಮಣ, ಖ್ಯಾತ ಭಾರತೀಯ ವ್ಯಂಗ್ಯಚಿತ್ರಕಾರ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248